## 05-09-2024




### ವಿದ್ಯಾರ್ಥಿಗಳು ಕಾದು ಅಪರಂಜಿಗಳಾಗಬೇಕು

ಡಾ.ಜಿ.ಹೆಚ್. ಮಹದೇವಸ್ವಾಮಿ

ವಿದ್ಯಾರ್ಥಿಯಾದವನಿಗೆ ರಾಷ್ಟ್ರೀಯ ಸೇವಾ ಯೋಜನೆಯ ಅರಿವಿರಬೇಕು ತನ್ನನ್ನು ತಾನು ತೊಡಗಿಸಿಕೊಳ್ಳಬೇಕು. ನಮ್ಮನ್ನು ನಾವು ಬದಲಾಯಿಸಿಕೊಳ್ಳದಿದ್ದರೇ ಬೇರೆಯವರನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ವಿಜಯನಗರ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ಪ್ರಾಧ್ಯಾಪಕರಾದ ಡಾ.ಜಿ.ಹೆಚ್.ಮಹದೇವಸ್ವಾಮಿಯವರು ಅಭಿಪ್ರಾಯ ಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ದಿನಾಂಕ:12.09.2024ರ ಗುರುವಾರ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆಯ 2024–25ನೇ ಶೈಕ್ಷಣಿಕ ವರ್ಷದ ಕಾರ್ಯಚಟುವಟಿಕೆಗಳ ಉದ್ಘಾಟನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ರಾಷ್ಟ್ರೀಯ ಸೇವಾ ಯೋಜನೆಯು ವಿದ್ಯಾರ್ಥಿಗಳಿಗೆ ಫ್ಯಾಷನ್ ಆಗಬಾರದು ಬದಲಾಗಿ ಪ್ಯಾಸ್ಸನ್ ಆಗಬೇಕು ಎಂದರು. ರಾಷ್ಟ್ರೀಯ ಸೇವಾ ಯೋಜನೆಯು ನಮಗೆ ಶಿಸ್ತನ್ನು, ಗುಂಪಿನಲ್ಲಿ ಕೆಲಸಮಾಡುವುದನ್ನು,

ಸಮಯದ ಪಾಲನೆಯನ್ನು ಕಲಿಸುತ್ತದೆ. ನನಗಲ್ಲ ನಿನಗೆ ಎಂಬುದು ರಾಷ್ಟ್ರೀಯ ಸೇವಾ ಯೋಜನೆಯ ಧ್ಯೇಯವಾಕ್ಯದಂತೆ ಎಲ್ಲವನ್ನು ಕಲಿಸುತ್ತಾ ತನ್ನನ್ನು ತಾನು ಅರ್ಪಣೆ ಮಾಡಿಕೊಳ್ಳುವುದನ್ನು ಮತ್ತು ನಕಾರಾತ್ಮಕ ಆಲೋಚನೆಗಳು ಬರದಂತೆ ಬದುಕಲು ಕಲಿಸುತ್ತದೆ. ಸರಳವಾಗಿ ಜೀವನ ನಡೆಸುವುದನ್ನು, ಉತ್ತಮವಾದ ವ್ಯಕ್ತಿತ್ವ ನಿರ್ಮಾಣ, ಏಕಾಗ್ರತೆಯನ್ನು ವಿಶೇಷ ವಾರ್ಷಿಕ ಶಿಬಿರಗಳು ಸ್ವಯಂ ಸೇವಕರಿಗೆ ಕಲಿಸುತ್ತದೆ ಎಂದು ರಾ.ಸೇ.ಯೋ ಸ್ವಯಂ ಸೇವಕ ವಿದ್ಯಾರ್ಥಿಗಳಿಗೆ ತಿಳಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡರು ಮಾತನಾಡುತ್ತಾ ರಾ.ಸೇ.ಯೋ ಸ್ವಯಂ ಸೇವಕರು ವಾರ್ಷಿಕ ಶಿಬಿರಗಳಲ್ಲಿ ಭಾಗವಹಿಸುವುದರಿಂದ ಅಲ್ಲಿನ ನಿಯಮಗಳು ಜೀವನದ ನಿಯಮಗಳಾಗುತ್ತವೆ. ನಾಯಕತ್ವದ ಗುಣವನ್ನು ಬೆಳೆಸುವ ಜೊತೆಗೆ ವೇದಿಕೆಯ ಭಯವನ್ನು ದೂರಮಾಡುತ್ತದೆ, ಶಿಸ್ತಿನ ಜೀವನವನ್ನು ನಡೆಸುವಂತೆ ಪ್ರೇರೇಪಿಸುತ್ತದೆ ಎಂದರು.

ಕು.ಸಂಹಿತ ಹಾಗೂ ತಂಡದವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮವನ್ನು ರಾ.ಸೇ.ಯೋ ಕಾರ್ಯಕ್ರಮಾಧಿಕಾರಿ ಶ್ರೀ.ಸಿದ್ಧರಾಜು.ಎಸ್. ಸ್ವಾಗತಿಸಿದರು. ಅಧ್ಯಾಪಕರು ಹಾಗೂ ಅಧ್ಯಾಪಕೇತರರು, ರೇ.ಸೇ.ಯೋ. ಸ್ವಯಂ ಸೇವಕರು ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದ ಕಾರ್ಯಕ್ರಮವನ್ನು ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಸೌಮ್ಯ.ಎಂ ನಿರೂಪಿಸಿ ವಂದಿಸಿದರು.



Vidyavardhaka First Grade College, Mysuru – Events, Special Talks, Seminars and Activities page















Vidyavardhaka First Grade College
NATIONAL SERVICE SCHEME
ACTIVITIES FOR THE YEAR 2024-25
Chief Guest


Chief Guest
Prof. G. H. Mahadevaswamy
Coordinator NSS VVFGC







